ಬಾಲ ಬಳಗ

# ಚಿಗುರು ಚಿಲುಮೆ



chiguruchilume@gmail.com

August 15 2014

Volume 01 Issue 01

## Contents


- Stories
- Poems
- Essays
- Photographs
- Opinion

- Film: The Karate Kid
- Book: Totto Chan
- Guest

- Overview
- Upcoming events

ಪ್ರಿಯ ಓದುಗರೆ,


ಎಲ್ಲರಿಗೂ ನನ್ನ ನಮಸ್ಕಾರ. ನಿಮಗೆಲ್ಲ ತಿಳಿದಿರುವ ಹಾಗೆ ಬಾಲಬಳಗ ಶಾಲೆಯು ಮಕ್ಕಳ-ಪಾಲಕರ ಗುರುಗಳ ನಡುವಿನ ಕೊಂಡಿಯಾಗಿದೆ. ಮಕ್ಕಳು ಶಾಲೆಗೆ ಅತ್ಯಂತ ಹುರುಪಿನಿಂದ ಓಡಿ ಬರಬೇಕು ಮಕ್ಕಳ ಸರ್ವತೋಮುಖವಾಗಿ ಕಲೆ,ಸಾಹಿತ್ಯ,ಸಂಗೀತ, ವಿಜ್ಞಾನ, ತಂತ್ರಜ್ಞಾನ,ಸಾಮಾಜಿಕವಾಗಿ ಹೀಗೆ ಎಲ್ಲ ಕ್ಷೇತ್ರಗಳಲ್ಲಿ ಪ್ರಗತಿ ಸಾಧಿಸಬೇಕು ಎನ್ನುವುದು ಬಾಲಬಳಗದ ಮತ್ತು ನಮ್ಮ ನಿಮ್ಮೆಲ್ಲರ ಆಶಯ. ಈ ಚಿಂತನೆಯ ಭಾಗವಾಗಿ ಬಾಲಬಳಗವು ಸದಾ ಒಂದಲ್ಲಾ ಒಂದು ರೀತಿಯ ಪ್ರಯತ್ನ ನಡೆಸಿರುತ್ತದೆ. ಮಕ್ಕಳ ಬೆಳವಣಿಗೆಯಲ್ಲಿ ಪಾಲಕರ ಹಾಗು ಗುರುಗಳ ಪಾತ್ರ ಅತಿ ಮುಖ್ಯವಾದುದು. ಬರೀ ಶಾಲೆಗೆ ಕಳುಹಿಸಿದರಾಯಿತು ನಮ್ಮ ಜವಾಬ್ದಾರಿ ಮುಗಿಯಿತು ಎನ್ನುವಂತಿಲ್ಲ. ಕಾಲಕಾಲಕ್ಕೆ ಬದಲಾಗುತ್ತಿರುವ ತಂತ್ರಜ್ಞಾನ, ಯುಗದಲ್ಲಿ ಪಾಲಕರು ಗುರುಗಳು ತಮ್ಮ ಅರಿವನ್ನು ಹೆಚ್ಚಿಸಿಕೊಳ್ಳುವ ಅವಶ್ಯಕತೆ ಇದೆ. ಅದು ಇಂಟರ್ನೆಟ್ ಯುಗದಲ್ಲಿ ಯಾವದೇ ವಿಷಯವನ್ನು ಅತಿ ಸುಲಭವಾಗಿ ಕಲಿಯುವ ಸಾಧ್ಯತೆಯಿದೆ.
ಇದೇ ದಿಕ್ಕಿನಲ್ಲಿ ಬಾಲಬಳಗ ಶಾಲೆಯು ಮತ್ತೊಂದು ಪುಟ್ಟ ಹೆಜ್ಜೆ ಇಟ್ಟಿದೆ. ನಮ್ಮ ಶಾಲೆಯ ವತಿಯಿಂದ 'ಚಿಗುರು ಚಿಲುಮೆ ' ಎಂಬ ಮಾಸಿಕವನ್ನು ಹೊರತರುತಿದ್ದೇವೆ. ಈ ಪತ್ರಿಕೆಯು ಅಂತರ್ಜಾಲದ ಮೂಲಕ ಎಲ್ಲರಿಗೂ ಸುಲಭವಾಗಿ ದೊರೆಯಬಹುದಾಗಿದೆ. ಈ ಪತ್ರಿಕೆಯ ಸಂಪಾದಕರು, ಸಂಚಾಲಕರು, ಶಾಲೆಯಲ್ಲಿಯೇ ಕಲಿತು ದೊಡ್ಡವರಾಗಿ ಬೇರೆ ಬೇರೆ ವಿಷಯಗಳಲ್ಲಿ ಅಭ್ಯಾಸ ಮಾಡುತ್ತಿರುವವರು. ದಿನನಿತ್ಯದ ಗಡಿಬಿಡಿಯಲ್ಲಿ ಬರೆಯುತ್ತಿರುವ ಪಾಲಕರು. ಎಲ್ಲರೂ ಒಟ್ಟಾರೆ ಇಂಟರ್ನೆಟನ ಬಳಕೆ ಮಾಡುವುದನ್ನು ಕಲಿಯಬೇಕು. ಇಮೇಲ್ ಕಳಿಸುವುದನ್ನು ಸುಲಭವಾಗಿ ಮಾಡಬೇಕು ಎನ್ನುವುದು ಇ ಪತ್ರಿಕೆಯ ಮೂಲ ಉದ್ದೇಶ.

## Introduction

ಅದರ ಜೊತೆಜೊತೆಗೆ ಬಾಲಬಳಗವು ಹಂಚಿಕೊಳ್ಳ ಬಹುದಾದಂಥ ಸಾಕಷ್ಟು ವಿಷಯಗಳನ್ನು ಪತ್ರಿಕೆ ಮೂಲಕ ತಲುಪಿಸುವ ಉದ್ದೇಶವನ್ನು ಹೊಂದಿದೆ. ಈ ಪತ್ರಿಕೆಯಲ್ಲಿ ಮಕ್ಕಳು, ಪಾಲಕರು ಬರೆದಂಥ ಕಥೆ ,ಕವನ, ಛಾಯಾಚಿತ್ರ ಇನ್ನೂ ಅನೇಕ ವಿಷಯಗಳು ಅಂಕಣಗಳಾಗಿ ಮೂಡಿಬರಲಿವೆ. ಪಾಲಕರು ಓದಿ ತಿಳಿದುಕೊಳ್ಳಬೇಕಾದಂಥ ವಿಷಯಗಳ ಪ್ರಸ್ತಾವನೆ , ಮನೆ  ಮಂದಿ ಎಲ್ಲಾ ಕುಳಿತು ನೋಡಿ  ರಂಜಿಸಬಹುದಾದಂಥ ಚಲನಚಿತ್ರದ ಬಗ್ಗೆ ಇಲ್ಲಿ ಚರ್ಚಿಸಲಾಗುತ್ತದೆ. ಇನ್ನೂ  ಅನೇಕ ರೀತಿಯಲ್ಲಿ ಬೆಳೆಯುವ ವಿಚಾರವನ್ನು ಹೊಂದಿದ್ದೇವೆ.
ಒಂದು ಒಳ್ಳೆಯ ವಿಚಾರ ಬೆಳೆದು ಫಲ ಕೊಡಬೇಕಾದರೆ ಯಾವುದೇ ಒಬ್ಬ ವ್ಯಕ್ತಿ, ಒಂದು ಸಂಸ್ಥೆ
ಮಾಡಲು ಸಾಧ್ಯವಿಲ್ಲ. ಆದರೆ ನಾವೆಲ್ಲ ಕೂಡಿ ಕೆಲಸ ಮಾಡಿದಲ್ಲಿ ಪೋಷಿಸಿದಲ್ಲಿ ಅದರ ಆಶಯ ಪೂರ್ಣವಾಗುವುದರಲ್ಲಿ ಯಾವುದೇ ಸಂದೇಹವಿಲ್ಲ. ಇದರ  ಸಂಪೂರ್ಣ ಯಶಸ್ಸು ನಿಮ್ಮ ಮೇಲೆ ಅವಲಂಬಿತವಾಗಿದೆ. ಅಂತೆಯೇ ನಾವೂ ಕೂಡ ನಿಮ್ಮಿಂದ ಸತತವಾಗಿ ಲೇಖನಗಳನ್ನು ಕಥೆ ಕವನಗಳನ್ನುಅಪೇಕ್ಷಿಸುತ್ತೇವೆ. ಇದರದೇ ಮುಂದಿನಭಾಗವಾಗಿ 'ವಾಟ್ಸ ಅಪ್' ನಲ್ಲಿ ಪ್ರತಿಯೊಂದು ತರಗತಿಯ ಗುಂಪನ್ನು ಮಾಡಿ ಅದರಿಂದ ಯಾರು ಬೇಕಾದರೂ ನಿಮ್ಮ ಅನಿಸಿಕೆಗಳನ್ನು ಸುಲಭವಾಗಿ ಕೊಡಬಹುದು. ಉದಾಹರಣೆಗೆ ನೀವು ಓದಿದ ಪುಸ್ತಕವಾಗಿರಬಹುದು, ಚಾರಣದ ಸ್ಥಳವಾಗಿರಬಹುದು ಹೀಗೆ ಮುಂತಾದ ವಿಷಯಗಳನ್ನು; ಶಾಲೆಯಿಂದ ಪ್ರವಾಸಕ್ಕೆ ಹೋದಾಗ ವಾಟ್ಸ ಅಪ್ ಗುಂಪಿನಿಂದ ಮರಳಿ ಬರುವ ಸುದ್ದಿಗಳನ್ನು ತಿಳಿಸಬಹುದು. ಹೀಗೆ ಅನೇಕಾನೇಕ ಸಾಧ್ಯತೆಗಳು ತೆರೆದುಕೊಳ್ಳುತ್ತವೆ.

ಇಂದು ಮೊದಲ ಆವೃತ್ತಿ ಬಂದಿರುವುದು ಸಂತೋಷದ ವಿಚಾರ. ನಿಮ್ಮ ಸಲಹೆ ಸೂಚನೆಗಳನ್ನು, ಶಹಬ್ಬಾಶ್ ಮೆಚ್ಚುಗೆಯನ್ನು ಮುಕ್ತ ಮನಸ್ಸಿನಿಂದ ನಿರೀಕ್ಷಿಸುತ್ತೇವೆ.

ದೀಪಕ ಪಾಟೀಲ



## Introduction

# ಹಸೆ ಚಿತ್ರಕಲೆ ಕಾರ್ಯಾಗಾರ

ಹಸೆ ಎಂದರೆ ಶುಭ. ಮದುವೆ , ಹಬ್ಬ ಮುಂತಾದ ಶುಭ ಸಮಾರಂಭದಲ್ಲಿ ಬರೆಯುವ ಚಿತ್ರವೇ ಹಸೆ ಚಿತ್ರ. ಕೃಷಿ ಜೀವನದ ಜೊತೆಗೆ ಮಲೆನಾಡಿನ ರೈತರು ಜತನದಿಂದ ಬೆಳೆಸಿದ ಚಿತ್ರಕಲೆ ಹಸೆ. ಅಳಿವಿನಂಚಿನಲ್ಲಿದ್ದರೂ ಕೆಲವೇ ಕೆಲವು ಆಸಕ್ತರ ಅವಿರತ ಶ್ರಮದಿಂದ ಉಳಿದುಕೊಂಡಿವೆ. ಅಂತಹದರಲ್ಲಿ ಶ್ರೀ ರಾಧಾ ಕೃಷ್ಣ ಬಂದಗದ್ದೆಯವರು ಒಬ್ಬರು. ಇವರು ಶಿವಮೊಗ್ಗ ಜಿಲ್ಲೆಯ ಸಾಗರತಾಲೂಕಿನ ಕೆಳದಿ(ಚನ್ನಮ್ಮನ ಕೆಳದಿ) ಊರಿನವರು. ಅಲ್ಲಿ 'ಹಸೆಮನೆ' ಎನ್ನುವ ಗ್ರಾಮೀಣ ಚಿತ್ರಕಲಾ ಕೇಂದ್ರವೊಂದನ್ನು ಸ್ಥಾಪಿಸಿ ದೇಶದ ಎಲ್ಲೆಡೆ ಹಸೆ ಚಿತ್ರ ಕಾರ್ಯಾಗಾರಗಳನ್ನು ನಡೆಸುತ್ತಾರೆ.ಅಂಥಹ ಒಂದು ಕಾರ್ಯಾಗಾರ ಧಾರವಾಡದ ನಮ್ಮ ಬಾಲಬಳಗ ಶಾಲೆಯಲ್ಲಿ ದಿನಾಂಕ ೧೧-೧೨- ಜೂನ್ ರಂದು ನಡೆದದ್ದು ನಮ್ಮ ಸುದೈವ. ಎರಡು ದಿನದ ಈ ಕಾರ್ಯಗಾರದಲ್ಲಿ ಶಿಕ್ಷಕರು , ಪಾಲಕರು , ಮಕ್ಕಳು ಪಾಲ್ಗೊಂಡಿದ್ದರು.

ಮೊದಲ ದಿನ ಜಾನಪದ ಕಲೆ ಎಂದರೇನು,ಹಸೆ ಎಂದರೇನು? ಅದರ ವೈಶಿಷ್ಟ್ಯ ಮೂಲ ಆಕರಗಳಾದ ವೃತ್ತ, ಆಯತ,ತ್ರಿಕೋನ ,ಚೌಕಗಳನ್ನೇ ಆಧಾರವಾಗಿಟ್ಟುಕೊಂಡು ಚಿತ್ರಕಲೆಯ ಗಂಧವನ್ನೇ ಅರಿಯದವರೂ ಎಷ್ಟು ಸರಾಗವಾಗಿ ಚಿತ್ರಿಸಬಹುದೆಂದು ಹೇಳಿಕೊಟ್ಟರು. ಕೆಲವು ಮೂಲ ವಿನ್ಯಾಸಗಳನ್ನು ಹೇಳಿಕೊಟ್ಟರು. ಇದರ ಇನ್ನೊಂದು ಮುಖ್ಯ ಅಂಶ ವೆಂದರೆ ಇದನ್ನು ಪ್ರಾಕೃತಿಕ ಬಣ್ಣಗಳಿಂದ ಹಳದಿ, ಕಂದು, ಕೆಮ್ಮಣ್ಣು , ಸಗಣಿ ಇವುಗಳಿಂದ ತಯಾರಿಸಿಕೊಂಡು ಚಿತ್ರಿಸುವುದು.







ನಾವು ಮಾಡಿದ ಚಿತ್ರಗಳು

ಎರಡನೇ ದಿನ ಎಲ್ಲರೂ ಒಂದು ಡ್ರಾಯಿಂಗ ಶೀಟ್ ತೆಗೆದುಕೊಂಡು ಹಸೆ ಚಿತ್ರ ಬಿಡಿಸಲು ಪ್ರಾರಂಭಿಸಿದೆವು. ಒಬ್ಬರಿಗೊಬ್ಬರು ಚೆನ್ನಾಗಿದೆ ಎಂದು ಪ್ರೋತ್ಸಹಿಸಿಕೊಂಡೆವು. ಎರಡೇ ಈ ಗಂಟೆಗಳಲ್ಲಿ ಸುಂದರವಾದ ಹಸೆ ತಯಾರಾಗಿತ್ತು. ನಂತರ  ಶಾಲೆಯ ಆವರಣದ ಗೋಡೆಗಳ ಮೇಲೆ ಸುಂದರ ಹಸೆ ಚಿತ್ರಗಳು ಮೂಡಿಬಂದವು . ಕಾರ್ಯಾಗಾರದ ಕೊನೆಯಲ್ಲಿ ಎಲ್ಲರೂ ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು. ನೋಡಿದಾಗ ಕಠಿಣ ಎನಿಸುವ ಹಸೆ ಚಿತ್ರ ಎರಡೇ ಒಪ್ಪತ್ತಿನಲ್ಲಿ ಕರಗತವಾಗಿದ್ದು, ಆಶ್ಚರ್ಯ ಸಂತೋಷಗಳನ್ನುಂಟು ಮಾಡಿತ್ತು.ಇತ್ತೀಚಿನ ದಿನಗಳಲ್ಲಿ ಈ  ರೀತಿಯ ಚಿತ್ರಗಳನ್ನು ಬಿಡಿಸುವುವ ಹವ್ಯಾಸ (craze) ಹೆಚ್ಚಾಗುತ್ತಿದೆ. ಅಂಥಹ ಕೆಲಸಕ್ಕೆ ದುಡ್ಡೂ ಸಾಕಷ್ಟು ಗಳಿಸಬಹುದು. ಆದರೆ ನನಗೆ ಈ ರೀತಿ ಮಕ್ಕಳಿಗೆ ಕಾರ್ಯಾಗಾರ ಮಾಡುವುದೇ  ಇಷ್ಟ ಇದರಿಂದ ಕಲೆ ಉಳಿದು ಬೆಳೆಯುತ್ತದೆ ಎನ್ನುವ ರಾಧಾಕೃಷ್ಣ ಅವರ ಕಳಕಳಿಯ ಮಾತುಗಳು ಮನದಾಳದಲ್ಲಿ ಮೂಡಿದವು. ಅವರನ್ನು ಮತ್ತೆ ಬರಲು ಕೇಳಿಕೊಂಡು ಮಕ್ಕಳು ಧನ್ಯವಾದ ಹೇಳಿದರು.

ವಸಂತಾ  ಕನವಳ್ಳಿ
ಶಿಕ್ಷಕಿ



# ನಾನು ಮತ್ತು ಬಾಲಬಳಗ

೧೫ ವರ್ಷಗಳ ಹಿಂದೆ ನನ್ನ ಮಗಳನ್ನು ಸೇರಿಸುವುದರೊಂದಿಗೆ ನನ್ನ ಮತ್ತು ಬಾಲಬಳಗದ ಸಂಬಂಧ ಪ್ರಾರಂಭವಾಯಿತು. ಮಕ್ಕಳೊಡನೆಯ ಒಡನಾಟ ನನಗೆ ಇಷ್ಟವಾಗಿರುವುದರಿಂದ ಮತ್ತು ಬಾಲಬಳಗದಲ್ಲಿ ಪಾಲಕರಿಗೆ ಅವಕಾಶವಿರುವುದರಿಂದ ನಾನು ಆಗಾಗ ಬಾಲಬಳಗಕ್ಕೆ ಹೋಗಿ ತರಗತಿಯಲ್ಲಿ ಕುಳಿತು ಅಲ್ಲಿರುವ ಕಲಿಕಾ ಪದ್ದತಿಯನ್ನು ತಿಳಿದುಕೊಳ್ಳುತ್ತಿದ್ದೆ. ನನಗೆ ಆ ಕ್ಷಣಗಳು ಅದ್ಭುತ ಆನಂದವನ್ನು ಕೊಡುತ್ತಿದ್ದವು. ಒಂದು ದಿನ ಬಾಲಬಳಗದಲ್ಲಿ  ಶಿಕ್ಷಕಿಯಾಗಿ ಕೆಲಸ ಮಾಡುವ ಸಂದರ್ಭ ಒದಗಿ ಬಂತು. ಅದು ನನ್ನ ಅತ್ಯಂತ ಆನಂದದ ಕ್ಷಣವಾಗಿತ್ತು. ಪಾಲಕತ್ವದ ಆನಂದವೂ ದೊರಕಲಾರಂಬಿಸಿತು. ಅಲ್ಲಿಂದ ಪ್ರಾರಂಭವಾದ ನನ್ನ ನಡಿಗೆಯಲ್ಲಿ ನನ್ನಲ್ಲಿರುವ ಅನೇಕ ಅಂಶಗಳನ್ನು ನನಗೆ ಗುರುತಿಸಿಕೊಳ್ಳಲು ಬಾಲಬಳಗ ಸಹಾಯ ಮಾಡಿತು. ವಿದ್ಯಾರ್ಥಿಯಾಗಿದ್ದಾಗ ಮಾಡದ ವಿಷಯಗಳಾದ ನೃತ್ಯ, ಆಟ, ನಟನೆ , ಭಾಷಣ , ಧೈರ್ಯ , ಸಾಹಿತ್ಯಿಕ ಓದು , ಪರಿಸರ ಪ್ರಜ್ಞೆ ಜೀವನ ಶಿಕ್ಷಣ ಹೀಗೆ ಹಲವಾರು ಅಂಶಗಳನ್ನು ನನ್ನ ಪ್ರಜ್ಞೆಗೆ ತಂದು ಅದರ ಆನಂದವನ್ನು ಪರಿಚಯಿಸಿದ್ದು ಈ ಬಾಲಬಳಗ. ನಾನು ಇಲ್ಲಿ ಶಿಕ್ಷಕಿಯಾಗಿ ಮಾತ್ರ ಕೆಲಸ ಮಾಡದೆ ವಿದ್ಯಾರ್ಥಿಯಾಗಿ ಮುನ್ನಡೆಯುತ್ತಿದ್ದೇನೆ. ಪ್ರತಿ ದಿನ ಪ್ರತಿ ತರಗತಿಯಲ್ಲಿ ಮಕ್ಕಳು ಪಾಟವನ್ನು ಹೇಳಿಕೊಡುವ ಅಥವಾ ತೋರಿಸಿಕೊಡುವ ಕೆಲಸವನ್ನು ಮಾಡುತ್ತಾರೆ. ಹೀಗೆ ವೃತ್ತಿಜೀವನ , ಸಂಸಾರ , ವಿಧ್ಯಾರ್ಥಿ ಜೀವನ ಮತ್ತು ಸಾಮಾಜಿಕ ಜೀವನದಲ್ಲಿ ನನಗೆ ಸಂತೋಷದಿಂದ ಮುಂದೆ ಸಾಗಲು ಸಹಾಯ ಮಾಡುತ್ತಿರುವ ಬಾಲಬಳಗಕ್ಕೆ ಎಷ್ಟು ಧನ್ಯವಾದಗಳನ್ನು ತಿಳಿಸಿದರೂ ಕಡಿಮೆ. ನನಗೆ ಈ ರೀತಿಯ ಅನುಭವಗಳನ್ನು ಕೊಟ್ಟ ಬಾಲಬಳಗ ಅರಳುತ್ತಿರುವ ಮಕ್ಕಳಿಗೆ ತುಂಬಾ ಹಿತಕರ ಮತ್ತು ಒಳ್ಳೆಯ ವಾತಾವರಣವಾಗಿದೆ. ಇಂಥ ಒಂದು ಸಂಸ್ಥೆಯನ್ನು ಕಟ್ಟಿ ಸಮಾಜಕ್ಕೆ ಕೊಡುಗೆಯಾಗಿ ನೀಡಿದ ಆ ದಿವ್ಯ ಮನಸ್ಸುಗಳಿಗೆ ತುಂಬು ಹೃದಯದಿಂದ ಅಭಿನಂದನೆಗಳು.

ತೇಜಸ್ವಿನಿ
ಶಿಕ್ಷಕಿ



Opinion

# Photographer of the month

## Mihir Ritti
## Satpura
## 9th



Photography is my hobby. I love capturing photos. I had access to variety of cameras since my childhood. Many times I played with camera, and gradually started taking snaps. I developed more interest after seeing photographs taken by minchu anna, especially those of birds.

... still I have got to learn many skills of photography.


© Mihir Ritti

Glow


Small is Beautiful
© Mihir Ritti

© Mihir Ritti



Wings of fire





This engaging series of childhood recollections tells about an ideal school in Tokyo during World War II that combined learning with fun, freedom, and love. This unusual school had old railroad cars for classrooms, and it was run by an extraordinary man-its founder and headmaster, Sosaku Kobayashi-who was a firm believer in freedom of expression and activity.

In real life, the Totto-chan of the book has become one of Japan's most popular television personalities-Tetsuko Kuroyanagi. She attributes her success in life to this wonderful school and its headmaster.

The charm of this account has won the hearts of millions of people of all ages and made this book a runaway bestseller in Japan, with sales hitting the 4.5 million mark in its first year.

You can borrow a copy from school. Limited copies.

## Suggested Reading





12-year-old Dre Parker could've been the most popular kid in Detroit, but his mother's latest career move has landed him in China. Dre immediately falls for his classmate Mei Ying—and the feeling is mutual—but cultural differences make such a friendship impossible. Even worse, Dre's feelings make an enemy of the class bully, Cheng. In the land of kung fu, Dre knows only a little karate, and Cheng puts “the karate kid” on the floor with ease. With no friends in a strange land, Dre has no one to turn except maintenance man Mr. Han, who is secretly a master of kung fu. As Han teaches Dre that kung fu is not about punches and parries, but maturity and calm, Dre realizes that facing down the bullies will be the fight of his life.

You can collect it from school. Please bring your pen-drive.

## Suggested Film


# Our Team



**Sampada**



**Minchu**



**Deepak**

You can join too!

**Contact us at** **chiguruchilume@gmail.com**